ಶ್ರೀ ಜಿ. ಎಸ್. ಬಾಗಲಕೋಟ್.—ಮಾನ್ಯ ಅಧ್ಯಕ್ಷರೇ, ನಮ್ಮ ಹಿರಿಯ ಸದಸ್ಯರು ಕೆಲವು ಮಾರ್ಮಿಕವಾದ ಪ್ರಶ್ನೆಗಳನ್ನು ಕೇಳಿದ್ದಾರೆ. ಪವಿತ್ರವನದ ಪಕ್ಕದಲ್ಲಿ ದೇವಸ್ಥಾನವೂ ಇದೆ. ದೇವಸ್ಥಾನಕ್ಕೆ ಬರುವವರು ಭಕ್ತಾದಿಗಳು, ಅದನ್ನು ಬಿಟ್ಟು ಸುಮ್ಮನೆ ಬರುವವರು ವಿಹಾರಾರ್ಥಿಗಳು. ಭಕ್ತರೂ ಕೂಡಾ ವಿಹಾರಾರ್ಥಿಗಳಾಗಿರಬಹುದು, ವಿಹಾರಾರ್ಥಿಗಳೂ ಕೂಡಾ ಭಕ್ತರಾಗಿರಬಹುದು. ಪವಿತ್ರವನದ ಪವಿತ್ರತೆಯನ್ನು ವಿಹಾರಾರ್ಥಿಗಳು, ಭಕ್ತರು ಅಲ್ಲದೆ, ಅರಣ್ಯ ಇಲಾಖೆಯವರೂ ಕೂಡಾ ಒಳ್ಳೆಯ ರೀತಿಯಿಂದ ಕಾಯ್ದುಕೊಂಡು ಬರುತ್ತಿದ್ದಾರೆ.

## ಚಿಕ್ಕನಾಯಕನ ಹಳ್ಳಿಯಲ್ಲಿ ೫ ಎಂ. ವಿ. ಎ. ಟ್ರಾನ್ಸ್‌ಫಾರ್ಮರ್ ಅಳವಡಿಸುವುದು.

೨೦೭. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕನಾಯಕ ಹಳ್ಳಿ ವಿದ್ಯುತ್ ಸ್ಟೇಷನ್ನಿನಲ್ಲಿ ಕೇವಲ ೧ ಎಂ ವಿ ಎ ಟ್ರಾನ್ಸ್‌ಫಾರ್ಮರು ಇದ್ದು ಈ ಪ್ರದೇಶದಲ್ಲಿ ವೋಲ್ಟೇಜು ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಈ ತೊಂದರೆ ನಿವಾರಿಸಲು ೫ ಎಂ ವಿ ಎ ಟ್ರಾನ್ಸ್‌ಫಾರ್ಮರು ಮಂಜೂರು ಮಾಡುವಂತೆ ಸರ್ಕಾರವನ್ನು ಕೋರಲಾಗಿದೆಯೆ ?

ಇ). ಈ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು).—

ಅ) ಚಿಕ್ಕನಾಯಕನಹಳ್ಳಿ ಸ್ಟೇಷನ್ನಿನಲ್ಲಿ ಹಾಲಿಯಿರುವ ಟ್ರಾನ್ಸ್‌ಫಾರ್ಮರಿನ ಸಾಮರ್ಥ್ಯ ೩ ಎಂ ವಿ ಎ ಈ ಪ್ರದೇಶದಲ್ಲಿ ಕಡಿಮೆ ವೋಲ್ಟೇಜು ಇರುವುದು ಗಮನಕ್ಕೆ ಬಂದಿದೆ.

ಆ) ಹಾಲಿಯಿರುವ ೩ ಎಂ ವಿ ಎ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರನ್ನು ತೆಗೆದು ೫ ಎಂ ವಿ ಎ ಟ್ರಾನ್ಸ್‌ಫಾರ್ಮರು ಹಾಕುವ ಯೋಜನೆಯಿದೆ.

ಇ) ಮೇಲಿನ ಯೋಜನೆಯನ್ನು ಮಂಡಳಿಯು ೧೯೮೮-೮೯ನೇ ಸಾಲಿನ ಕಾರ್ಯಕ್ರಮದಲ್ಲಿ ಸೇರಿಸಲಾಗಿದೆ.

ಶ್ರೀ ಬಿ. ಲಕ್ಕಪ್ಪ —ಅಧ್ಯಕ್ಷರೇ, ಪಪರ್ ಮಂತ್ರಿಗಳು ನಮ್ಮ ಜಿಲ್ಲೆಯವರು ಎಂಬ ಸಂತೋಷ್ ಬಿಟ್ಟರೆ ಈ ಇಲಾಖೆಯಿಂದ ನಮಗೇನೂ ಕೆಲಸ ಆಗುತ್ತಿಲ್ಲ. ಇಲ್ಲಿ ವೋಲ್ಟೇಜ್ ಕಡಿಮೆ ಇದೆ ಅದಕ್ಕಾಗಿ ೫ ಎಂ.ವಿ ಎ. ಟ್ರಾನ್ಸ್‌ಫಾರ್ಮರ್ ಹಾಕಿ ಎಂದು ಹೇಳಿ ನಾಲ್ಕು ಸಾರಿ ರಿಕ್ವೆಸ್ಟ್ ಮಾಡಿರುತ್ತೇನೆ. ಆದರೆ ಇದುವರೆಗೆ ಹಾಕಲಿಲ್ಲ. ಇದರಿಂದಾಗಿ ಅಲ್ಲಿ ಐ.ಪಿ. ಸೆಟ್ಸ್ ಓಡುತ್ತಿಲ್ಲ, ಮನೆಗಳಲ್ಲಿ ವೋಲ್ಟೇಜ್ ಇಲ್ಲ. ರೈತರಿಗೆ ತೊಂದರೆಯಾಗಿದೆ. ಈ ವೋಲ್ಟೇಜ್ ಕಡಿಮೆ ಇರುವ ವಿಚಾರ ಪೇಗೂ ನಿಮ್ಮ ಗಮನಕ್ಕೆ ಬಂದಿದೆ, ಇದರ ಬಗ್ಗೆ, ಯೋಜನೆಯನ್ನೂ ಹಾಕಿಕೊಂಡಿದ್ದೀರಿ, ಮಾಡಬೇಕೆಂಬ ಮನಸ್ಸೂ ಇದೆ. ಇವನ್ನು ಯಾವಾಗ ಮಾಡುತ್ತೀರಿ. ಇದು ಮುಖ್ಯವಾಗಿ ಆಗಬೇಕಾಗಿರತಕ್ಕಂಥ ಕೆಲಸ, ಎಷ್ಟು ದಿವಸದಲ್ಲಿ ಇದನ್ನು ಮಾಡಿಕೊಡುತ್ತೀರಿ ಎಂದು ಕೇಳಬಯಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.— ಈಗ ವಿದ್ಯುತ್ ಉತ್ಪಾದನೆ ಕಡಿಮೆಯಾಗಿ ಈ ಸಮಸ್ಯೆ ದೇಶದಲ್ಲೆಲ್ಲಾ ಇದೆ. ತುಮಕೂರು ಜಿಲ್ಲೆಯ, ಗುಬ್ಬಿ, ತಿಪಟೂರು ಮತ್ತು ಚಿಕ್ಕನಾಯಕನಹಳ್ಳಿ ಭಾಗದಲ್ಲಿ ಸ್ವಲ್ಪ ಹೆಚ್ಚು ಸಮಸ್ಯೆ ಇದೆ. ಈಗಾಗಲೇ ಗುಬ್ಬಿಯಲ್ಲಿ ಒಂದು ಟ್ರಾನ್ಸ್‌ಫಾರ್ಮರ್ ಹಾಕುತ್ತಿದ್ದೇವೆ. ಇದು ಆದಮೇಲೆ ತಿಪಟೂರಿನಲ್ಲಿ ಹಾಕುತ್ತೇವೆ ತಿಪಟೂರಿನ ಕೆಲಸ ಆದ ತಕ್ಷಣ ಚಿಕ್ಕನಾಯಕನಹಳ್ಳಿಯಲ್ಲಿ ಹಾಕುತ್ತೇವೆ, ಈ ವೋಲ್ಟೇಜ್ ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಹುಳಿಯಾರಿನಲ್ಲಿ ಒಂದು ಸ್ಟೇಷನ್ ಮಾಡಬೇಕೆಂದು ಕಾರ್ಯಕ್ರಮ ಕೂಡಾ ಹಾಕಿಕೊಂಡು ೧೯೮೮-೮೯ನೇ ಸಾಲಿನಲ್ಲಿ ಇದನ್ನು ಸೇರಿಸಿದ್ದೇವೆ. ವೋಲ್ಟೇಜ್ ಇಂಪ್ರೂವ್ ಮಾಡಬೇಕೆಂಬ ವಿಶೇಷ ಆಸಕ್ತಿ ಇರುವುದರಿಂದ ಈ ಎರಡೂ ಕಾರ್ಯ ಕ್ರಮಗಳನ್ನೂ ಚಿಕ್ಕನಾಯಕನಳ್ಳಿ ಭಾಗದಲ್ಲಿ ಮಾಡುತ್ತಿದ್ದೇವೆ.

ಟ್ರಾನ್ಸ್‌ಫಾರ್ಮರ್ಸ್ ಸಣ್ಣ ಟ್ರಾನ್ಸ್‌ಫಾರ್ಮರ್ಸ್ ಇಲ್ಲ. ಇಲ್ಲಿ ಯಾವ ಕಾರ್ಯಕ್ರಮ ಹೊಕಿಕೊಂಡಿರುತ್ತೇವೆಯೋ ಆ ರೀತಿಯಲ್ಲಿ ಆರ್ಡರ್ ಮಾಡಿರುತ್ತೇವೆ. ಟ್ರಾನ್ಸ್‌ಫಾರ್ಮರ್ಸ್ ಸಿಕ್ಕಬೇಕಾದರೆ ಸ್ವಲ್ಪ ಕಾಲಾವಕಾಶವನ್ನು ಎನ್.ಜಿ.ಇ.ಎಫ್.ನವರು ತೆಗೆದುಕೊಳ್ಳುತ್ತಾರೆ. ಈಗಾಗಲೇ ಚಿಕ್ಕನಾಯಕನಹಳ್ಳಿಗೆ ಟ್ರಾನ್ಸ್‌ಫಾರ್ಮರ್ಸ್ ಮಂಜೂರಾಗಿದೆ. ತಿಪಟೂರಿನಲ್ಲಿ ನಡೆಯುತ್ತಿರುವ ಕೆಲಸ ಮುಗಿದ ಕೂಡಲೇ ಚಿಕ್ಕನಾಯಕನಹಳ್ಳಿಯ ಕೆಲಸವನ್ನು ತೆಗೆದುಕೊಳ್ಳುತ್ತೇವೆ. ಇನ್ನು ೩-೪ ತಿಂಗಳಾದರೂ ಆಗಬಹುದು.

ಶ್ರೀ ಬಿ. ಲಕ್ಕಪ್ಪ.—ಈಗ ಹುಳಿಯಾರದಲ್ಲಿ ಆಗುತ್ತಿರುವ ಸ್ಟೇಷನ್ ಹೊಸದು. ಆದರೆ ನಮ್ಮಲ್ಲಿ ಟ್ರಾನ್ಸ್‌ಫಾರ್ಮರ್ಸ್ ಅತಿ ಶೀಘ್ರವಾಗಿ ಮಾಡಬೇಕಾಗಿರುವ ಕೆಲಸ. ತಿಪಟೂರಿನ ಕೆಲಸ ಮುಗಿಯುವ ತನಕ ತಾವು ಕಾಯುವುದು ಬೇಡ. ನಮ್ಮಲ್ಲಿ ಸಂಪೂರ್ಣ ೩-೪ ತಿಂಗಳಿಂದ ಮಳೆ ಇಲ್ಲ. ಅಡಿಕೆ ಮತ್ತು ತೆಂಗಿನ ತೋಟಗಳೆಲ್ಲಾ ಒಣಗಿ ಹೋಗುತ್ತಿವೆ. ಆದ್ದರಿಂದ ಆದಷ್ಟು ಬೇಗ ಎನ್ನುವ ಬದಲು ಅತಿ ಬೇಗ ಅಂದರೆ ಒಂದು ತಿಂಗಳಲ್ಲಿ ದಯವಾಡಿ ಮಾನ್ಯ ಮಂತ್ರಿಗಳು ಈ ಕೆಲಸ ಮಾಡಿಸಿ ಕೊಡಬೇಕು. ತಿಪಟೂರಿನಲ್ಲಿ ಮಾಡುತ್ತಿರುವ ಕೆಲಸಕ್ಕೂ ಇಲ್ಲಿ ಟ್ರಾನ್ಸ್‌ಫಾರ್ಮರ್ಸ್ ಬದಲಾವಣೆ ಮಾಡಿ ಕೊಡುವುದಕ್ಕೂ ಸಂಬಂಧವಿಲ್ಲ ತಿಪಟೂರಿನಲ್ಲಿ ಕೆಲಸವಾಗುತ್ತಿರಲಿ ಇಲ್ಲಿ ಚಿಕ್ಕನಾಯಕನ ಹಳ್ಳಿಯಲ್ಲಿಯೂ ಕೆಲಸ ಪ್ರಾರಂಭ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ—ಹುಳಿಯಾರಿಕ್ಕೂ ಇದಕ್ಕೂ ಸಂಬಂಧವಿಲ್ಲ. ಹುಳಿಯಾರದಲ್ಲಿ ಹೊಸ ಸ್ಟೇಷನ್ ಮಾಡುತ್ತಿರುವುದು. ಈಗ ಗ್ಯಾಂಗ್‌ಮೆನ್‌ಗಳು ಗುಬ್ಬಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಮುಗಿಸಿಕೊಂಡು ತಿಪಟೂರಿಗೆ ಬರುತ್ತಾರೆ ಅಲ್ಲಿಂದ ಚಿಕ್ಕನಾಯಕನಹಳ್ಳಿಗೆ ಬರುತ್ತಾರೆ. ನಾನು ಮೊದಲೇ ಹೇಳಿದಹಾಗೆ ೩-೪ ತಿಂಗಳಾಗದಿದ್ದರೂ ಎರಡು ತಿಂಗಳಲ್ಲಿ ಈ ಕೆಲಸ ಆದರೂ ಆಗಬಹುದು.

## ರಾಜ್ಯದಲ್ಲಿ ರೇಷ್ಮೆ ಮಾರಾಟದಿಂದ ಬಂದ ಕಮಿಷನ್

೧೪೮೨. ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ಕಾನೂನು ಸಂಸದೀಯ ವ್ಯವಹಾರ ಮತ್ತು ರೇಷ್ಮೆ ವ್ಯವಸಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧೯೮೭-೮೮ನೇ ಸಾಲಿನಲ್ಲಿ ಯಾವ ಯಾವ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ಎಷ್ಟೆಷ್ಟು ರೇಷ್ಮೆ ಗೂಡು ವ್ಯಾಪಾರವಾಗಿರುವ ಪ್ರಮಾಣವೆಷ್ಟು ?

ಆ) ಪ್ರತಿ ಒಂದು ಮಾರುಕಟ್ಟೆಯಲ್ಲಿ ಗಳಿಸಿರುವ ಕಮಿಷನ್ ಹಣದ ವಿವರವೆಷ್ಟು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ, ವ್ಯವಹಾರ ಮತ್ತು ರೇಷ್ಮೆ ಖಾತೆ ಸಚಿವರು).—

ಅ) ೧೯೮೭-೮೮ನೇ ಸಾಲಿನಲ್ಲಿ ಪ್ರತಿ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ವ್ಯಾಪಾರವಾಗಿರುವ ರೇಷ್ಮೆ ಗೂಡಿನ ಪ್ರಮಾಣವನ್ನು ಅನುಬಂಧದಲ್ಲಿ ಕಾಲಂ ೨ ಮತ್ತು ೩ರಲ್ಲಿ ನಮೂದಿಸಲಾಗಿದೆ.

ಆ) ೧೯೮೭-೮೮ನೇ ಸಾಲಿನಲ್ಲಿ ಮಾರುಕಟ್ಟೆಯಲ್ಲಿ ಗಳಿಸಿರುವ ಮಾರುಕಟ್ಟೆ ಶುಲ್ಕವ ಹಣದ ವಿವರವನ್ನು ಅನುಬಂಧದಲ್ಲಿ ಕಾಲಂ ೨ ಮತ್ತು ೪ ರಲ್ಲಿ ನಮೂದಿಸಲಾಗಿದೆ.